

ಇವಳಿಗೆ ತಂದುಕೊಟ್ಟ ಮೇಲೆ ನವೆ ಹುಟ್ಟಿಕೊಂಡಿತ್ತು.

'ಸಾಬಣ್ಣ, ದೋಣಿ ಬರಂಗೈತೆ, ನಾನಿನ್ನೂ ಹೋತೀನಿ' ಅಂದರೂ ಬಿಡಲಿಲ್ಲ, 'ಇಸ್ಕೂಲು ಬಿಟ್ಟು ಇದ್ಯಾವ ಕೆಲ್ಸಕ್ಕೆ ಹೋತಿದೀಯ?' ಕೇಳಿದ. 'ಕೆಮಿಕಲ್ ಫ್ಯಾಕ್ಟರಿಗೆ ಸಾಬಣ್ಣೋ...' ದೋಣಿ ಕಡೆ ನೋಡಿದಳು. 'ವಿಷ, ವಿಷ ಕಕ್ಕೋ ಕಾರ್ಖಾನೆ ಅದು, ಅತ್ತ ಸಾಯ್ಸದೂ ಇಲ್ಲ, ಬದುಕ್ಸದೂ ಇಲ್ಲ, ಊನ ಆಗಿಬಿಡ್ತೀಯ' ಅವಳ ಕೈಯನ್ನೂ ಮುಟ್ಟಿದ, ಅವಳು ಚಕ್ಕನೆ ಹಿಂತೆಗೆದುಕೊಂಡಳು. ಗ್ರಾಮದ ಹುಡುಗಿಯರು ಇವರಿಬ್ಬರನ್ನೇ ನೋಡುತ್ತಾ ಏನೇನೋ ಒಳಗೊಳಗೆ ಮಾತನಾಡಿಕೊಳ್ಳುತ್ತಿದ್ದರು, ಇದು ಭೀಮವ್ವಳಿಗೆ ಅಸಹನೀಯವಾಗಿ ತೋರುತ್ತಿತ್ತು. 'ಹೈದ್ರಾಬಾದ್‌ನಲ್ಲಿ ಒಳ್ಳೆ ಕೆಲ್ಸ ಕೊಡಿಸ್ತೀನಿ, ಯೋಚ್ನೆ ಮಾಡಿ ಹೇಳು. ಮನೆಮಂದಿಗೆ ಹೇಳ್ಬೇಡ, ನಿನ್ನ ಮದ್ವೆ ಮಾಡಿಸಿ ಗೊಡ್ಡೆತ್ನಂಗೆ ಕಳಿಸಿಬಿಡ್ತಾರೆ' ಅನ್ನುತ್ತಿದ್ದಂತೆ ಭೀಮವ್ವ ದಡದಲ್ಲಿ ಬಂದು ನಿಂತ ದೋಣಿ ಕಡೆ ದೌಡಾಯಿಸಿದಳಾದರೂ ಸಾಬಣ್ಣ ಅವಳ ಓಟದ ಸ್ವಾದವನ್ನು ಒಳಗೊಳಗೆ ಹೀರಿಕೊಳ್ಳತೊಡಗಿದ.

* * *

ಭೀಮವ್ವ ಕಿಟ್‌ಬ್ಯಾಗಿನೊಂದಿಗೆ ರಸ್ತೆಬದಿಯ